# ಜಲಾನಯನ ಅಭಿವೃದ್ಧಿ ಇಲಾಖೆ

## ವಿಶ್ವ ಬ್ಯಾಂಕ್ ನೆರವಿನ

# ರಿವಾರ್ಡ್ (REWARD) ಯೋಜನೆ

(ಕೃಷಿಯ ಸುಸ್ಥಿರತೆಗಾಗಿ ನವೀನ ಅಭಿವೃದ್ಧಿಯ ಮೂಲಕ ಜಲಾನಯನ ಪ್ರದೇಶಗಳನ್ನು ಪುನಶ್ಚೇತನಗೊಳಿಸುವುದು)

(Rejuvenating Watersheds for Agriculture Resilience through Innovative Development-REWARD)



**ಜಲಾನಯನ ಅಭಿವೃದ್ಧಿ ಯೋಜನೆಗಳಡಿ ರಿವಾರ್ಡ್ ಯೋಜನಾ ಪ್ರದೇಶದ ಸ್ವ-ಸಹಾಯ ಗುಂಪುಗಳ ಮತ್ತು ಒಕ್ಕೂಟಗಳ ಸದಸ್ಯರ ಸಾಮರ್ಥ್ಯ ಬಲವರ್ಧನೆ ಹಾಗೂ ಕೌಶಲ್ಯ ಆಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಕ್ರಮಗಳಿಗೆ ಬೆಂಬಲ**

**2025**

Scanned with OKEN Scanner

ರಿವಾರ್ಡ್ (REWARD) ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿನೊಂದಿಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 2021–22ನೇ ಸಾಲಿನಿಂದ ಅನುಷ್ಠಾನ ಮಾಡಲಾಗುತ್ತಿದೆ. ಯೋಜನೆಯ ಅಡಿಯಲ್ಲಿ ಮುಖ್ಯವಾಗಿ ಭೂ ಸಂಪನ್ಮೂಲ ಸಮೀಕ್ಷೆಯನ್ನು 25 ಜಿಲ್ಲೆಗಳ 25 ಲಕ್ಷ ಹೆಕ್ಟೆರ್ ಪ್ರದೇಶದಲ್ಲಿ ತಾಂತ್ರಿಕ ಪಾಲುದಾರರಾದ, ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳು, ಭಾರತೀಯ ವಿಜ್ಞಾನ ಸಂಸ್ಥೆ (IISc), NBSS-LUP, KSRSAC, KSNDMC ಮತ್ತು CoE-WM ಸಂಸ್ಥೆಗಳ ತಾಂತ್ರಿಕ ಸಲಹೆ ಮತ್ತು ಸಹಯೋಗದೊಂದಿಗೆ ಕೈಗೊಳ್ಳಲಾಗುತ್ತಿದೆ. ಮುಂದುವರೆದು 20 ಜಿಲ್ಲೆಗಳ 1 ಲಕ್ಷ ಹೆಕ್ಟೆರ್ ಜಲಾನಯನ ಪ್ರದೇಶದ 20 ಉಪಜಲಾನಯನಗಳಲ್ಲಿ ಭೂ ಸಂಪನ್ಮೂಲ ಮಾಹಿತಿಯಾಧಾರಿತ ವೈಜ್ಞಾನಿಕ ಮತ್ತು ಸ್ಥಳ ನಿರ್ದಿಷ್ಟ ಉಪಚಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

## ರಿವಾರ್ಡ್ (REWARD) ಯೋಜನೆಯ ಮುಖ್ಯ ಚಟುವಟಿಕೆಗಳು

- ಯೋಜನೆಯಡಿ 25 ಲಕ್ಷ ಹೆಕ್ಟೆರ್ ಮಳೆಯಾಶ್ರಿತ ಪ್ರದೇಶದಲ್ಲಿ ಭೂಸಂಪನ್ಮೂಲ ಸಮೀಕ್ಷೆ (Land Resource Inventory-LRI) ಮತ್ತು ಜಲವಿಜ್ಞಾನ ಅಧ್ಯಯನವನ್ನು ತಾಂತ್ರಿಕ ಸಂಸ್ಥೆಗಳೊಂದಿಗೆ ಕೈಗೊಳ್ಳಲಾಗುತ್ತಿದೆ.
- ಅಂದಾಜು 1.0 ಲಕ್ಷ ಹೆ. ಪ್ರದೇಶದಲ್ಲಿ (60 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ, 20 ಉಪ ಜಲಾನಯನಗಳು) ಭೂ–ಸಂಪನ್ಮೂಲ ಮತ್ತು ಜಲವಿಜ್ಞಾನ ಮಾಹಿತಿ ಆಧಾರಿತ ವೈಜ್ಞಾನಿಕ ಸಂಪೂರ್ಣ ಜಲಾನಯನ ಅಭಿವೃದ್ಧಿ ಯೋಜನೆ ತಯಾರಿಸಿ, ಅನುಷ್ಠಾನಗೊಳಿಸಲಾಗುತ್ತಿದೆ.
- ಯೋಜನೆಯಡಿ ಸಮುದಾಯವನ್ನು ಸಂಘಟಿಸುವುದರೊಂದಿಗೆ, ಸಮುದಾಯಾಧಾರಿತ ಸಂಸ್ಥೆಗಳಾದ ಸ್ವ–ಸಹಾಯ ಗುಂಪುಗಳು, ಕ್ಷೇತ್ರ ಗುಂಪುಗಳು ಮತ್ತು ಜಲಾನಯನ ಕಾರ್ಯಕಾರಿ ಸಮಿತಿಗಳನ್ನು ರಚಿಸಿ, ಸಾಮಾರ್ಥ್ಯ ಬಲವರ್ಧನೆ ಮಾಡಲಾಗುತ್ತಿದೆ.
- ಭೂ ಸಂಪನ್ಮೂಲ ಮಾಹಿತಿಯಾಧಾರಿತ ಮಣ್ಣು ಮತ್ತು ನೀರು ಸಂರಕ್ಷಣಾ ಉಪಚಾರ ಕ್ರಮಗಳಿಂದ ಕೃಷಿ ಭೂಮಿಯ ಫಲವತ್ತತೆ ಹೆಚ್ಚಿಸುವುದು ಹಾಗೂ ಅಂತರ್ಜಲ ಮರುಪೂರ್ಣ ಮಾಡುವುದು. ಇದರಿಂದ ಬೆಳೆಗಳ ಉತ್ಪಾದಕತೆಯಲ್ಲಿ ಹೆಚ್ಚಿನ ಫಸಲನ್ನು ಪಡೆಯಲಾಗುತ್ತದೆ.
- ರೈತರಿಗೆ ಕೃಷಿ ಸಲಹೆಗಳನ್ನು ಒದಗಿಸುವುದು–ಮುಖ್ಯವಾಗಿ ಭೂ ಸಂಪನ್ಮೂಲ ಮಾಹಿತಿ ಬಳಕೆ ಕುರಿತು ರೈತರಿಗೆ ಅರಿವು ಮೂಡಿಸಲು ಗ್ರಾಮ ಮಟ್ಟದ ತರಬೇತಿಗಳನ್ನು ಕೈಗೊಂಡು, ಬೆಳೆ ಶಿಫಾರಸ್ಸು, ಪೋಷಕಾಂಶಗಳ ಲಭ್ಯತೆ, [illegible] ಫಲವತ್ತಾದ ಮಣ್ಣಿನ ಆಳ, ಇಳಿಜಾರು, ಭೂಮಿಯ ಒಳ ಪದರಗಳ ಗುಣಧರ್ಮಗಳ ಮಾಹಿತಿಗಳನ್ನೊಳಗೊಂಡ LRI ಕಾರ್ಡ್ ವಿತರಿಸಿ ರೈತರಿಗೆ ವಿವರಿಸುವುದು. ಕೃಷಿ–ಹವಾಮಾನ ಮಾಹಿತಿಯನ್ನು ವಾರಕ್ಕೆ ಎರಡು ದಿನ SMS, Whatsapp ಮತ್ತು ವರುಣ ಮಿತ್ರ Help Desk............................ ಮುಖಾಂತರ ರೈತರಿಗೆ ಒದಗಿಸಲಾಗುತ್ತಿದೆ.
- ಆಯ್ದ ರೈತ ಉತ್ಪಾದಕ ಸಂಸ್ಥೆಗಳ ಮೌಲ್ಯ ಸರಪಳಿ ಮತ್ತು ವ್ಯವಹಾರ ಅಭಿವೃದ್ಧಿ ಚಟುವಟಿಕೆಗಳನ್ನು ತಾಂತ್ರಿಕ ಪರಿಣಿತಿ ಸಂಸ್ಥೆಯ ಸಹಯೋಗದೊಂದಿಗೆ ಕೈಗೊಳ್ಳಲಾಗುತ್ತಿದೆ.
- ಜಲಾನಯನ ನಿರ್ವಹಣೆ ಕುರಿತು ಅಧ್ಯಯನ ಮತ್ತು ತರಬೇತಿ ಕೈಗೊಳ್ಳಲು ಜಲಾನಯನ ಅಭಿವೃದ್ಧಿ ಉತ್ಕೃಷ್ಟತಾ ಕೇಂದ್ರವನ್ನು (Centre of Excellence on Watershed Management) ಸ್ಥಾಪನೆಮಾಡಲಾಗಿದೆ.

## ಜೀವನೋಪಾಯ ಘಟಕ (Livelihood Component)

ವಿಶ್ವ ಬ್ಯಾಂಕ್ ನೆರವಿನ REWARD ಯೋಜನೆಯ ಜೀವನೋಪಾಯ ಘಟಕದಡಿ, ಯೋಜನಾ ಪ್ರದೇಶದಲ್ಲಿ (Livelihood Component) ಭೂ ರಹಿತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಣ್ಣ ರೈತರ ಕುಟುಂಬಗಳ ಮಹಿಳೆಯರು ರಚಿಸಿಕೊಂಡಿರುವ ಸ್ವ–ಸಹಾಯ ಗುಂಪುಗಳನ್ನು (NRLM ವತಿಯಿಂದ ಮಾನ್ಯತೆ ಪಡೆದಿರುವ) ಮತ್ತು ಸ್ವ–ಸಹಾಯ ಗುಂಪುಗಳ ಒಕ್ಕೂಟಗಳನ್ನು (NRLM ವತಿಯಿಂದ ರಚಿಸಿರುವ Grama Panchayath level Federations-GPLF) ಗುರುತಿಸಲಾಗಿದೆ. ಸದರಿ ಸ್ವ–ಸಹಾಯ ಗುಂಪುಗಳ ಸದಸ್ಯರುಗಳು ಮತ್ತು ಒಕ್ಕೂಟಗಳು ಯೋಜನೆಯಡಿಯಲ್ಲಿ ಕೃಷಿ ಮತ್ತು ಕೃಷಿಯೇತರ ಕೌಶಲ್ಯ ಆಧಾರಿತ ಕಿರು ಉದ್ದಿಮೆಗಳನ್ನು ಕೈಗೊಂಡು ಕುಟುಂಬದ ಆದಾಯವನ್ನು ಹೆಚ್ಚಿಸಲು ಅನುದಾನವನ್ನು ಒದಗಿಸಲಾಗುತ್ತಿದೆ.

### 1. ಸ್ವ–ಸಹಾಯ ಗುಂಪುಗಳಿಗೆ ಸುತ್ತು ನಿಧಿ (Revolving Fund)

ಸ್ವ–ಸಹಾಯ ಗುಂಪುಗಳ ಸದಸ್ಯರು ತಮ್ಮ ಸುಸ್ಥಿರ ಜೀವನೋಪಾಯಕ್ಕಾಗಿ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಸುತ್ತು ನಿಧಿಯನ್ನು ಪಡೆದು ಗುಂಪಿನ ಸದಸ್ಯರ ಅಗತ್ಯತೆ ಮೇರೆಗೆ ಸರದಿಯಲ್ಲಿ ಬಳಸಬಹುದಾಗಿದೆ. ಸ್ವ–ಸಹಾಯ ಗುಂಪುಗಳು ಕೈಗೊಳ್ಳಬೇಕಾದ ಚಟುವಟಿಕೆಯನ್ನು ಜಂಟಿಯಾಗಿ ಒಂದು

Scanned with OKEN Scanner

ಗುಂಪಿನಲ್ಲಿ ಕೈಗೊಳ್ಳಬಹುದು ಅಥವಾ ಗುಂಪಿನ ಸದಸ್ಯರಿಗೆ ವೈಯಕ್ತಿಕವಾಗಿ ನೆರವು ನೀಡಲು ಗುಂಪು ನಿರ್ಧರಿಸಬಹುದು. ಜಲಾನಯನ ಯೋಜನಾ ಪ್ರದೇಶದಿಂದ ಗುರುತಿಸಲ್ಪಟ್ಟ ಸ್ವ-ಸಹಾಯ ಗುಂಪುಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಡಿಯಲ್ಲಿ ರಚಿಸಿರುವ ಜಲಾನಯನ ಕಾರ್ಯಕಾರಿ ಸಮಿತಿಯಿಂದ ಅನುಮೋದಿಸಲ್ಪಟ್ಟಿರಬೇಕು.

## ಸ್ವ-ಸಹಾಯ ಗುಂಪುಗಳು ಸುತ್ತು ನಿಧಿ ಪಡೆಯಲು ಮಾನದಂಡಗಳು (Criterias for SHGs to Avail Revolving Fund):

- ಬಯಲು/ಸಮತಟ್ಟು ಜಲಾನಯನ ಯೋಜನಾ ಪ್ರದೇಶಗಳಲ್ಲಿ 10 ರಿಂದ 20 ಸದಸ್ಯರಿರಬೇಕು.
- ಬೆಟ್ಟ/ಗುಡ್ಡಗಾಡು ಜಲಾನಯನ ಯೋಜನಾ ಪ್ರದೇಶಗಳಲ್ಲಿ 5 ರಿಂದ 10 ಸದಸ್ಯರಿರಬೇಕು.
- ಒಂದು ಕುಟುಂಬದಿಂದ ಒಬ್ಬ ವ್ಯಕ್ತಿಯನ್ನು ಮಾತ್ರ ಸದಸ್ಯತ್ವಕ್ಕೆ ಪರಿಗಣಿಸಬೇಕು.
- ಸ್ವ-ಸಹಾಯ ಗುಂಪುಗಳು ನಿಯಮಿತವಾಗಿ ತಪ್ಪದೆ ಸಭೆಗಳನ್ನು ಮಾಡುತ್ತಿರಬೇಕು (ಕನಿಷ್ಠ ಹದಿನೈದು ದಿನಕ್ಕೊಮ್ಮೆ).
- ನಡಾವಳಿ ಪುಸ್ತಕದಲ್ಲಿ ಕಡ್ಡಾಯವಾಗಿ ಸದಸ್ಯರ ಹಾಜರಾತಿಯ (ಶೇಕಡಾ 80 ಕ್ಕಿಂತ ಹೆಚ್ಚು) ನಿರ್ವಹಣೆ ಹೊಂದಿರಬೇಕು
- ಉಳಿತಾಯ ಮತ್ತು ಸಾಲಗಳ ರಿಜಿಸ್ಟರ್ ನಿರ್ವಹಣೆಯೊಂದಿಗೆ ಎಲ್ಲಾ ವ್ಯವಹಾರಗಳಿಗೆ ಸರಳ ಮತ್ತು ಸ್ಪಷ್ಟ ಪುಸ್ತಕಗಳ ನಿರ್ವಹಣೆ ಮಾಡುತ್ತಿರಬೇಕು.
- ಯೋಜನಾ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಸೇರಿರುವ ಸ್ವ-ಸಹಾಯ ಗುಂಪುಗಳಾಗಿರಬೇಕು.
- ಸ್ವ- ಸಹಾಯ ಸಂಘದ ಶೇ.75 ರಷ್ಟು ಸದಸ್ಯರುಗಳು ಭೂರಹಿತ, [illegible] ಮತ್ತು ಅತಿಸಣ್ಣ, ಸದಸ್ಯರಾಗಿರಬೇಕು
- ಸ್ವ-ಸಹಾಯ ಗುಂಪುಗಳು ಬ್ಯಾಂಕ್‌ನಲ್ಲಿ ಸಂಘದ ಹೆಸರಿನಲ್ಲಿ ಜಂಟಿ [illegible]ಂದಿಗೆ ಉಳಿತಾಯ ಖಾತೆಯನ್ನು ಹೊಂದಿರಬೇಕು. ಉಳಿತಾಯವನ್ನು ಪ್ರತಿ ತಿಂಗಳು ಜಮೆ [illegible]ಬೇಕು
- ಸ್ವ-ಸಹಾಯ ಗುಂಪುಗಳು ಈಗಾಗಲೇ ಯಾವುದಾದರು ಬ್ಯಾಂಕ್ ಗಳಿ[illegible]ಡೆದಿದ್ದಲ್ಲಿ ನಿಗದಿತ ಸಮಯದಲ್ಲಿ ಪಾವತಿಸಿರಬೇಕು ಮತ್ತು ಸುಸ್ತಿದಾರ (default) [illegible]ದೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರಬೇಕು.
- **ಮೊದಲು ಉಳಿತಾಯ-ನಂತರ ಸಾಲ** ಎಂಬುದು ಗುಂಪಿನ ಪ್ರತಿ ಸದಸ್ಯ[illegible]ಧ್ಯೇಯವಾಕ್ಯವಾಗಿರಬೇಕು.
- ಸ್ವ-ಸಹಾಯ ಗುಂಪುಗಳ ಸದಸ್ಯರು ಯೋಜನೆಯಡಿ ಏರ್ಪಡಿಸಿರುವ ತರಬೇತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರಬೇಕು.
- ಸ್ವ-ಸಹಾಯ ಗುಂಪುಗಳು ಸಂಬಂಧಪಟ್ಟ ಗ್ರಾಮ ಪಂಚಾಯತಿ ಹಂತದಲ್ಲಿ NRLM ವತಿಯಿಂದ ರಚಿಸಿರುವ ಒಕ್ಕೂಟದಲ್ಲಿ (GPLF) ಸೇರ್ಪಡೆಯಾಗಿರಬೇಕು.
- ಯೋಜನೆಯ ಅಡಿಯಲ್ಲಿ ಮೇಲಿನ ಮಾನದಂಡಗಳಂತೆ ಗುರುತಿಸಿರುವ ಪ್ರತಿ ಸ್ವ-ಸಹಾಯ ಗುಂಪಿಗೆ ಗರಿಷ್ಠ ರೂ.50000/- ಗಳನ್ನು ಸುತ್ತು ನಿಧಿಯಾಗಿ ನೀಡಲಾಗುವುದು.

## 2. ಸ್ವ-ಸಹಾಯ ಗುಂಪುಗಳ ಒಕ್ಕೂಟಗಳು ಸಹಾಯ ಧನ (Grant-in-Aid to SHG Federations) ಪಡೆಯಲು ಮಾನದಂಡಗಳು

ಒಕ್ಕೂಟಗಳು ಸಹಾಯಧನವನ್ನು ಪಡೆಯಲು ಕಿರು ಉದ್ದಿಮೆ ಅಭಿವೃದ್ಧಿ ಯೋಜನೆಯನ್ನು ಕ್ಷೇತ್ರ ಮಟ್ಟದ FNGO, PIA ಮತ್ತು NRLM ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಇತರೆ ಯೋಜನೆಗಳೊಂದಿಗೆ ಒಗ್ಗೂಡಿಸಿ ಯೋಜನೆಯನ್ನು ಸಿದ್ದಪಡಿಸಬೇಕು. ಯೋಜಿಸಿರುವ ಕಿರು ವ್ಯಾಪಾರ ಉದ್ದಿಮೆಯನ್ನು ಒಕ್ಕೂಟದ ಕೆಲವೊಂದು ಗುಂಪುಗಳು ಸೇರಿ ಕೈಗೊಳ್ಳಲು ಸಹಾಯಧನವನ್ನು ಬಳಸಬಹುದು.

- ಒಕ್ಕೂಟಗಳು ಪ್ರಮುಖ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಅಥವಾ ಉನ್ನತ ಮಟ್ಟಕ್ಕೆ ಚಟುವಟಿಕೆಗಳನ್ನು ವಿಸ್ತರಿಸಲು ಸಹಾಯಧನವನ್ನು ಪಡೆಯಬಹುದು.
- ಯೋಜನಾ ಪ್ರದೇಶದ ಗ್ರಾಮ ಪಂಚಾಯಿತಿ ಹಂತದಲ್ಲಿ NRLM ವತಿಯಿಂದ ಒಕ್ಕೂಟಗಳು ರಚಿಸಿರಬೇಕು/ಮಾನ್ಯತೆ ಪಡೆದಿರಬೇಕು.
- ಸಭೆಗಳು, ದಾಖಲಾತಿಗಳು ಮತ್ತು ಬ್ಯಾಂಕ್ ಖಾತೆಗಳ ಮಾನದಂಡಗಳು ಮೇಲಿನ ಸ್ವ-ಸಹಾಯ ಗುಂಪುಗಳಿಗೆ ತಿಳಿಸಿದಂತೆ ಒಕ್ಕೂಟಗಳಿಗೂ ಅನ್ವಯಿಸುತ್ತವೆ.
- ಒಕ್ಕೂಟದಲ್ಲಿರುವ ಕನಿಷ್ಠ 5 ಸ್ವ-ಸಹಾಯ ಗುಂಪುಗಳು ಒಟ್ಟಾಗಿ ಉದ್ದಿಮೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನ ಮಾಡುವ ಬಗ್ಗೆ ಒಕ್ಕೂಟದಲ್ಲಿ ನಿರ್ಣಯವಾಗಿರಬೇಕು.
- ಒಕ್ಕೂಟಗಳು ತಯಾರಿಸಿರುವ ವ್ಯವಹಾರ ಯೋಜನೆಯೊಂದಿಗೆ ಸಹಾಯಧನಕ್ಕಾಗಿ ಕಾರ್ಯಕಾರಿ ಸಮಿತಿಗೆ ಅರ್ಜಿ ಸಲ್ಲಿಸುವುದು.

Scanned with OKEN Scanner

- ಕಾರ್ಯಕಾರಿ ಸಮಿತಿಯವರು ಉದ್ದಿಮೆ ಅಭಿವೃದ್ಧಿ ಯೋಜನೆಯನ್ನು ಪರಿಶೀಲಿಸಿ ಅಂಗೀಕರಿಸಿ, PIA ಗೆ ಹಣ ಬಿಡುಗಡೆಗೆ ಕೋರಿ ಮನವಿ ಸಲ್ಲಿಸುವುದು.
- ಯೋಜನೆಯ ಅಡಿಯಲ್ಲಿ ವ್ಯವಹಾರ ಯೋಜನೆಯ ಒಟ್ಟು ಮೊತ್ತದ ಶೇ.50 ರಷ್ಟು ಅಥವಾ ಗರಿಷ್ಠ 4 ಲಕ್ಷಗಳು, ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ಸಹಾಯಧನವನ್ನು ಯೋಜನಾ ಪ್ರದೇಶದ ಪ್ರತಿ ಒಕ್ಕೂಟಕ್ಕೆ ನೀಡಲಾಗುವುದು. ಆದ್ದರಿಂದ ಒಕ್ಕೂಟಗಳು ಪೂರ್ಣ ಪ್ರಮಾಣದ ಯೋಜನೆಯನ್ನು ಅನುಷ್ಠಾನ ಮಾಡಲು ಬ್ಯಾಂಕ್ ಗಳೊಂದಿಗೆ ಸಮಾಲೋಚಿಸಿ ಸಾಲವನ್ನು ಪಡೆಯಬಹುದಾಗಿದೆ ಅಥವಾ NRLM ಯೋಜನೆಗಳೊಂದಿಗೆ ಒಗ್ಗೂಡಿಸಿ ಉಪಯೋಗ ಪಡೆಯಬಹುದಾಗಿದೆ.
- ಒಕ್ಕೂಟಗಳ ಸ್ವಂತ ಬಂಡವಾಳವನ್ನು ಹೂಡುವ ಕ್ರಿಯಾ ಯೋಜನೆಯೊಂದಿಗೆ ಮತ್ತು ಯೋಜನೆಯ ಸಹಾಯಧನವನ್ನು ಉದ್ದೇಶಿತ ಚಟುವಟಿಕೆಗೆ ಮಾತ್ರ ಬಳಸುತ್ತೇವೆಂದು ಮುಚ್ಚಳಿಕೆ ಪತ್ರ ನೀಡುವುದು.

## 3. ಉದ್ಯಮಶೀಲ ವ್ಯಕ್ತಿಗಳಿಗೆ ಬೀಜ ಧನ (Seed Money to Individual SHG Members)

1. ಉದ್ಯಮಶೀಲ ವ್ಯಕ್ತಿಯು ಹಣಕಾಸಿನ ಸಹಾಯಕ್ಕಾಗಿ ಜಲಾನಯನ ಸಮಿತಿಗೆ ಜೀವನೋಪಾಯದ ಪ್ರಸ್ತಾಪದೊಂದಿಗೆ ಅರ್ಜಿ ಸಲ್ಲಿಸಬೇಕು.
2. ಈ ಘಟಕದಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಸ್ಥಳೀಯ ಕುಶಲಕರ್ಮಿಗಳಿಗೆ ಆದ್ಯತೆ ನೀಡಲಾಗುವುದು.
3. ಸದಸ್ಯರ ಉದ್ದೇಶಿತ ಚಟುವಟಿಕೆಯನ್ನು ಅರ್ಹತೆಯ ಆಧಾರದ ಮೇಲೆ ಜಲಾನಯನ ಸಮಿತಿಯು ಚರ್ಚಿಸಿ ಅನುಮೋದಿಸಿದ ನಂತರ ಉದ್ಯಮಶೀಲ ವ್ಯಕ್ತಿಗಳಿಗೆ ಉದ್ದೇಶಿತ ಚಟುವಟಿಕೆಯನ್ನು ಕೈಗೊಳ್ಳಲು ಗರಿಷ್ಠ ಮೊತ್ತ ರೂ. 20,000/– ಬೀಜ ಧನ ವಾಗಿ ನೀಡಲಾಗುವುದು.
4. ಅಂತಹ ಉದ್ಯಮಶೀಲ ವ್ಯಕ್ತಿಯು ಪಡೆದ ಬೀಜ ಧನವನ್ನು ಮಾಸಿಕ ಆಧಾರದಲ್ಲಿ ಹಿಂದಿರುಗಿಸಬೇಕು, ಹಿಂದಕ್ಕೆ ಪಡೆದ ಹಣವನ್ನು ಮತ್ತೆ ಜಲಾನಯನ ಸಮಿತಿ ಸಭೆಯ ನಿರ್ಣಯದಂತೆ ಮರುಹೂಡಿಕೆ ಮಾಡಬಹುದಾಗಿದೆ.
5. ಉದ್ಯಮಶೀಲ ವ್ಯಕ್ತಿಗಳ ಸಾಮರ್ಥ್ಯ ಹಾಗೂ ಚಟುವಟಿಕೆಯನ್ನು ಆಧರಿಸಿ, ಮಾಸಿಕ ಕಂತುಗಳ ಸಂಖ್ಯೆ (ಗರಿಷ್ಠ 18 ತಿಂಗಳು) ಹಾಗೂ ಹಿಂದಿರುಗಿಸಬೇಕಾದ ಮೊತ್ತವನ್ನು ನಿರ್ಧರಿಸಲಾಗುತ್ತದೆ.

## ಅನುದಾನ (ಸುತ್ತು ನಿಧಿ/ಸಹಾಯ ಧನ/ಬೀಜ ಧನ) ಪಡೆಯಲು ಮತ್ತು ಬಿಡುಗಡೆ ಮಾಡಲು ಅನುಸರಿಸಬೇಕಾದ ಪ್ರಕ್ರಿಯೆ

**ಅನುದಾನಕ್ಕಾಗಿ ಗುಂಪಿನಲ್ಲಿ/ಒಕ್ಕೂಟಗಳಲ್ಲಿ ಚರ್ಚಿಸಿದ ನಿರ್ಣಯದೊಂದಿಗೆ ಜಲಾನಯನ ಕಾರ್ಯಕಾರಿ ಸಮಿತಿಗೆ ಅನುದಾನ ಕೋರಿ ಮನವಿ ಸಲ್ಲಿಸುವುದು.**

↓

**ಜಲಾನಯನ ಕಾರ್ಯಕಾರಿ ಸಮಿತಿಯು ಅರ್ಜಿಗಳನ್ನು, ಅರ್ಹತೆಗಳು, ಉದ್ದೇಶಗಳು ಮತ್ತು ಶ್ರೇಯಾಂಕ ಆಧಾರದ ಮೇಲೆ ತನ್ನ ನಿಯಮಿತ ಸಭೆಯಲ್ಲಿ ಚರ್ಚಿಸಿ, ನಿರ್ಣಯವನ್ನು ಅಂಗೀಕರಿಸಿ ಹಣ ಬಿಡುಗಡೆಗಾಗಿ ಯೋಜನಾ ಅನುಷ್ಠಾನ ಇಲಾಖೆಗೆ (PIA) ಗೆ ಮನವಿ ಸಲ್ಲಿಸುವುದು.**

↓

**ಉದ್ದೇಶಿತ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಮಾತ್ರ ಅನುದಾನವನ್ನು ಬಳಕೆ ಮಾಡಲಾಗುವುದೆಂದು ಸ್ವ-ಸಹಾಯ ಗುಂಪುಗಳಿಂದ / ಒಕ್ಕೂಟಗಳಿಂದ / ವೈಯಕ್ತಿಕ ಫಲಾನುಭವಿಗಳಿಂದ ದೃಢೀಕರಿಸಿ ಮುಚ್ಚಳಿಕೆ ಪತ್ರವನ್ನು ಛಾಪಾ ಕಾಗದದಲ್ಲಿ PIA ಗೆ ನೀಡುವುದು.**

↓

**ಜಲಾನಯನ ಸಮಿತಿಯು ಅನುಮೋದಿಸಿ ಆಯ್ಕೆ ಮಾಡಿದ ಸ್ವ-ಸಹಾಯ ಗುಂಪುಗಳಿಗೆ / ಒಕ್ಕೂಟಗಳಿಗೆ / ವೈಯಕ್ತಿಕ ಫಲಾನುಭವಿಗಳಿಗೆ ಯೋಜನಾ ಅನುಷ್ಠಾನ ಇಲಾಖೆಯು, ಇಲಾಖಾ ಮಾನದಂಡಗಳು ಮತ್ತು ಅನುಧಾನದ ಲಭ್ಯತೆಯ ಆಧಾರದ ಮೇಲೆ ಅನುದಾನವನ್ನು ಒದಗಿಸುವಂತೆ ನಿರ್ಣಯ ಕೈಗೊಳ್ಳುವುದು.**

↓

**ಆಯ್ಕೆಯಾದ ಸ್ವ-ಸಹಾಯ ಗುಂಪುಗಳಿಗೆ/ಒಕ್ಕೂಟಗಳಿಗೆ/ವೈಯಕ್ತಿಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಅನುದಾನವನ್ನು "ನೇರ ಫಲಾನುಭವಿ ವರ್ಗಾವಣೆ" (DBT) ಮೂಲಕ ಪಾವತಿ ಮಾಡುವುದು.**

**ಮೇಲೆ ತಿಳಿಸಿರುವ ಯೋಜನಾ ಅನುಧಾನವು ಯೋಜನೆಯ ಮಾನದಂಡಗಳು, ಯೋಜನೆಯ ಅಡಿಯಲ್ಲಿ ಲಭ್ಯವಿರುವ ಅನುಧಾನ ಮತ್ತು ರಾಜ್ಯಮಟ್ಟದ ಅನುಮೋದನೆಯ ಅನುಸಾರ ಬದಲಾವಣೆಗೆ ಒಳಪಟ್ಟಿರುತ್ತದೆ.**

Scanned with OKEN Scanner

ಕಾರ್ಯಯೋಜನೆ ಬಗ್ಗೆ ಪೂರ್ಣ ಮಾಹಿತಿಯನ್ನು ಪಡೆಯುತ್ತಾರೆ. ಮುಂದುವರೆದು, ಉದ್ದಿಮೆಯನ್ನು ಸುಸ್ಥಿರವಾಗಿ ಮತ್ತು ಒಂದು ಲಾಭದಾಯಕ ವಾಣಿಜ್ಯ ಉದ್ದಿಮೆಯಾಗಿ ಮುನ್ನಡೆಸಲು ಅಗತ್ಯವಿರುವ ತಾಂತ್ರಿಕ ಮಾಹಿತಿಗಾಗಿ, ಆರ್ಥಿಕ ನೆರವಿಗಾಗಿ, ವ್ಯಾಪಾರ ಮತ್ತು ಮಾರುಕಟ್ಟೆ ಅಭಿವೃದ್ಧಿಗಾಗಿ ಖಾಸಗಿ ಸಂಸ್ಥೆಗಳು / ಇಲಾಖೆಗಳು / ಬ್ಯಾಂಕ್‌ಗಳ ಸಂಪರ್ಕ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯಲು ಅಗತ್ಯವಾದ ಕಾರ್ಯ ಯೋಜನೆಯನ್ನು ರೂಪಿಸುವ ಕೌಶಲ್ಯವನ್ನು ಸಹ ಪರಿಣಿತ ಸಂಸ್ಥೆಯಿಂದ ಒದಗಿಸಲಾಗುವುದು. ಇದಲ್ಲದೆ, ತರಬೇತಿಯ ನಂತರ 1 ವರ್ಷದವರೆಗೆ ಪರಿಣಿತ ಸಂಸ್ಥೆಯಿಂದ ಅಗತ್ಯ ಬೆಂಬಲವನ್ನು (Handholding support) ನೀಡಲಾಗುವುದು.

## ರಿವಾರ್ಡ್ ಯೋಜನಾ ಪ್ರದೇಶದ ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಕೌಶಲ್ಯ ಆಧಾರಿತ ಉದ್ದಿಮೆಗಳ ಅಭಿವೃದ್ಧಿ ತರಬೇತಿಗೆ ಯೋಜಿಸಿರುವ ವಿವಿಧ ತರಬೇತಿಗಳ ವಿವರ ಮತ್ತು

| ಕ್ರ.ಸಂ. | ತರಬೇತಿ ವಿಷಯಗಳು | ತರಬೇತಿ ದಿನಗಳು |
|---|---|---|
| 1 | ರೇಷ್ಮೆ ಕೃಷಿ ಉದ್ಯಮಿ | 10 |
| 2 | ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆ | 10 |
| 3 | ವಾಣಿಜ್ಯ ತೋಟಗಾರಿಕೆ | 13 |
| 4 | ಕೃಷಿ ಉದ್ಯಮಿ | 13 |
| 5 | ಕುರಿ ಸಾಕಣೆ | 10 |
| 6 | ಕೋಳಿ ಸಾಕಣೆ | 10 |
| 7 | ಮೇಕೆ ಸಾಕಣೆ | 10 |
| 8 | ವಾಣಿಜ್ಯ ಹೂವಿನ ಕೃಷಿ | 10 |
| 9 | ಜೇನು ಸಾಕಣೆ | 10 |
| 10 | ಅಣಬೆ ಕೃಷಿ | 10 |
| 11 | ಪಶು ಮಿತ್ರ – (GEDP - MoRD ಅನುಮೋದಿಸಲಾಗಿದೆ) | 60 |
| 12 | ದಿನಸಿ ಮತ್ತು ಕಿರಾಣಾ ಅಂಗಡಿ (MRD ಅನುಮೋದಿಸಲಾಗಿದೆ) | 6 |
| 13 | ವಿಕಲಚೇತನರಿಗೆ EDP | 10 |
| 14 | ಫಾಸ್ಟ್ ಫುಡ್ ಸ್ಟಾಲ್ ಉದ್ಯಮಿ | 10 |
| 15 | ಸೆಲ್ ಫೋನ್ ರಿಪೇರಿ ಮತ್ತು ಸೇವೆ | 30 |
| 16 | ಬ್ಯೂಟಿ ಪಾರ್ಲರ್ ನಿರ್ವಹಣೆ | 30 |
| 17 | ದ್ವಿಚಕ್ರ ವಾಹನ ಮೆಕ್ಯಾನಿಕ್ | 30 |
| 18 | ಕಂಪ್ಯೂಟರೀಕೃತ ಲೆಕ್ಕಪತ್ರ ನಿರ್ವಹಣೆ | 30 |
| 19 | ಡೆಸ್ಕ್‌ಟಾಪ್ ಪ್ರಕಟಣೆ | 45 |
| 20 | ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್ ವರ್ಕಿಂಗ್ | 45 |
| 21 | ಮನೆಯಲ್ಲಿ ಅಗರಬತ್ತಿ ತಯಾರಿಕೆ | 10 |
| 22 | ಮೃದು ಆಟಿಕೆ ತಯಾರಿಕೆ ಮತ್ತು ಮಾರಾಟ | 13 |
| 23 | ಬಿದಿರು ಮತ್ತು ಬೆತ್ತದ ಕರಕುಶಲ ತಯಾರಿಕೆ | 13 |
| 24 | ಪುರುಷರ ಟೈಲರ್ | 30 |
| 25 | ಮಹಿಳಾ ಟೈಲರ್ | 30 |

ಪ್ರಕಟಣೆ

ಆಯುಕ್ತರ ಕಛೇರಿ
**ಜಲಾನಯನ ಅಭಿವೃದ್ಧಿ ಇಲಾಖೆ**
7ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು-560009
e-mail: Rewardkarnataka@gmail.com Website: https://www.watershed.kar.gov.in Phone: 080-22129601, 080-22100667
@WatershedGoK @kar_watershed @watershed_gok/ @watersheddevelopmentdepart6289

Scanned with OKEN Scanner

## ಸ್ವ-ಸಹಾಯ ಗುಂಪಿನ ಸದಸ್ಯರುಗಳಿಗೆ ಕೌಶಲ್ಯ ಆಧಾರಿತ ತರಬೇತಿಗಳು:

## ಯೋಜನೆಯಡಿ ಉದ್ಯಮಶೀಲತಾ ಅರಿವು ಕಾರ್ಯಕ್ರಮ (Entrepreneurship Awareness Program-EAP) ಹಾಗೂ ಕೌಶಲ್ಯ ಆಧಾರಿತ ಉದ್ದಿಮೆ ಅಭಿವೃದ್ಧಿ (Skill based Enterprise Development Program-SEDP) ತರಬೇತಿಗಳು

ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಉದ್ಯಮಶೀಲತಾ ಅರಿವು ಮೂಡಿಸುವ ಕಾರ್ಯಕ್ರಮ ಮತ್ತು ಕೌಶಲ್ಯ ಆಧಾರಿತ ಉದ್ದಿಮೆ ಅಭಿವೃದ್ಧಿ ತರಬೇತಿಗಳನ್ನು ಯೋಜನಾ ಪ್ರದೇಶದ ಸ್ವ ಸಹಾಯ ಗುಂಪಿನ ಸದಸ್ಯರಿಗೆ ಪರಿಣಿತಿ ಸಂಸ್ಥೆಯ ಸಹಯೋಗದೊಂದಿಗೆ ಏರ್ಪಡಿಸಲಾಗುವುದು.

ಸ್ವಂತ ಉದ್ದಿಮ ಸ್ಥಾಪಿಸಲು ಆಸಕ್ತಿ, ಸಾಮರ್ಥ್ಯ, ಕೌಶಲ್ಯ, ಸಂಪನ್ಮೂಲಗಳು ಮತ್ತು ಸಂಪರ್ಕಗಳು ಪ್ರಮುಖವಾಗುತ್ತವೆ. ಯೋಜನೆಯಡಿಯಲ್ಲಿ ಸದಸ್ಯರು ಆಯ್ಕೆ ಮಾಡಿಕೊಂಡಿರುವ ಸಂಭಾವ್ಯ ಉದ್ದಿಮೆಗಳ ಆಧಾರದ ಮೇಲೆ, ಆ ಪ್ರದೇಶದ ಪರಿಸ್ಥಿತಿ, ಸಂಪನ್ಮೂಲಗಳು, ಆಸಕ್ತಿ ಹೊಂದಿರುವ ಸದಸ್ಯರ ಪ್ರಸ್ತುತ ಕೌಶಲ್ಯ ಮತ್ತು ಉದ್ದಿಮೆಗಳ ಅಭಿವೃದ್ಧಿಗೆ ಅಗತ್ಯವಿರುವ ಕೌಶಲ್ಯಗಳು, ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಂಭಾವ್ಯ ಉದ್ಯಮಶೀಲರನ್ನು ಅಭಿವೃದ್ಧಿಪಡಿಸುವ ಹಾಗೂ ಉದ್ದಿಮೆಗಳನ್ನು ವಾಣಿಜ್ಯಾತ್ಮಕ ಉದ್ಯಮಗಳನ್ನಾಗಿಸುವ ಗುರಿಯನ್ನು ಹೊಂದಿದೆ.

ಈ ನಿಟ್ಟಿನಲ್ಲಿ, ಇಲಾಖೆಯು ಯೋಜನಾ ಪ್ರದೇಶದಲ್ಲಿರುವ ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಎರಡು ಹಂತಗಳಲ್ಲಿ ತರಬೇತಿಗಳನ್ನು ಕೈಗೊಂಡು ಫಲಾನುಭವಿಗಳು ಕೌಶಲ್ಯವನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ.

**ಮೊದಲನೆ ಹಂತದ ತರಬೇತಿ:- ಉದ್ಯಮಶೀಲತಾ ಅರಿವು ಮೂಡಿಸುವ ಕಾರ್ಯಕ್ರಮ (Entrepreneurship Awareness Program-EAP):** ಈ ಹಂತದಲ್ಲಿ, ಪ್ರಮುಖವಾಗಿ ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ವಿವಿಧ ಉದ್ದಿಮೆಗಳ ಬಗ್ಗೆ ಅರಿವು ಮೂಡಿಸುವ ಗ್ರಾಮ ಮಟ್ಟದ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಈ ಚಟುವಟಿಕೆಯ ಮುಖಾಂತರ ಅರಿವು ಮೂಡಿಸುವುದಲ್ಲದೇ ಹೆಚ್ಚಿನ ಕೌಶಲ್ಯತೆಗಾಗಿ ಹಾಗೂ ಕೌಶಲ್ಯ ಆಧಾರಿತ ಉದ್ದಿಮೆ ಅಭಿವೃದ್ಧಿ ತರಬೇತಿಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು ಮತ್ತು ಸದಸ್ಯರನ್ನು ಗುರುತಿಸುವುದು ಪ್ರಮುಖವಾಗಿರುತ್ತದೆ.

**ಎರಡನೆ ಹಂತದ ತರಬೇತಿ:- ಕೌಶಲ್ಯ ಆಧಾರಿತ ಉದ್ದಿಮೆ ಅಭಿವೃದ್ಧಿ ತರಬೇತಿ (Skill based Enterprise Development Program-SEDP):** ಈ ತರಬೇತಿಯು ವಸತಿ ಸಹಿತ ಜಿಲ್ಲಾ ಮಟ್ಟದ ತರಬೇತಿಯಾಗಿರುತ್ತದೆ. ಸದಸ್ಯರು ಅಭಿವೃದ್ಧಿ ಪಡಿಸಲು ಆಯ್ಕೆ ಮಾಡಿಕೊಂಡ ಉದ್ದಿಮೆಗಳ ಆಧಾರದ ಮೇಲೆ 10 ರಿಂದ 30 ದಿನಗಳವರೆಗೆ ತರಬೇತಿ ಇರುತ್ತದೆ. ಈ ತರಬೇತಿಯಲ್ಲಿ ಪ್ರಮುಖವಾಗಿ ವಿವಿಧ ಉದ್ದಿಮೆಗಳಲ್ಲಿ ಆಸಕ್ತಿಯುಳ್ಳ ಸದಸ್ಯರಿಗೆ, ಸದಸ್ಯರು ಆಯ್ಕೆ ಮಾಡಿಕೊಂಡಿರುವ ನಿಗದಿತ (Specific Enterprise) ಉದ್ದಿಮೆಗಳ ಅವಕಾಶಗಳನ್ನು ಪರಿಚಯಿಸುವುದು, ಉದ್ದಿಮೆಯನ್ನು ವ್ಯವಸ್ಥಿತವಾಗಿ ನಡೆಸುವುದಕ್ಕೆ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಪ್ರಬಲಗೊಳಿಸುವುದು, ಯಶಸ್ವಿ ಉದ್ದಿಮೆಗಳ ಭೇಟಿ ಮತ್ತು ವಿಚಾರ ವಿನಿಮಯ ವಿಷಯಗಳನ್ನು ಈ ತರಬೇತಿಯಲ್ಲಿ ಅಳವಡಿಸಲಾಗಿದೆ.

### ಎರಡನೆ ಹಂತದ ತರಬೇತಿಯಲ್ಲಿ ಭಾಗವಹಿಸುವ ಸದಸ್ಯರ ಮಾನದಂಡಗಳು

- ಫಲಾನುಭವಿಗಳು ಸ್ವ-ಸಹಾಯ ಗುಂಪುಗಳ ಸದಸ್ಯರಿರಬೇಕು.
- ಭೂ-ರಹಿತರು, ಅತೀ ಸಣ್ಣ ರೈತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಆದ್ಯತೆ ನೀಡಲಾಗುವುದು.
- ಸದಸ್ಯರು 18 ವರ್ಷ ವಯಸ್ಸಿಗಿಂತ ಮೇಲ್ಪಟ್ಟು 50 ವರ್ಷದ ಒಳಗಿರಬೇಕು.
- ಸಂಘದ ನಿಯಮಿತ ಸಭೆಗಳಲ್ಲಿ ಶೇಕಡ 80ಕ್ಕಿಂತ ಹೆಚ್ಚು ಹಾಜರಾತಿ ಹೊಂದಿರಬೇಕು.
- ತರಬೇತಿಗೆ ಆಯ್ಕೆಯಾದ ಸದಸ್ಯರ ಕುಟುಂಬಗಳು, ಸದಸ್ಯರನ್ನು ವಸತಿ ಸಹಿತ ಜಿಲ್ಲಾಮಟ್ಟದ 10 ರಿಂದ 30 ದಿನಗಳ ತರಬೇತಿಗೆ ಕಳುಹಿಸಲು ಒಪ್ಪಿರಬೇಕು.
- ತರಬೇತಿಯ ನಂತರ ಉದ್ದಿಮೆಗಳ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ಹೂಡಲು ಮತ್ತು ಬ್ಯಾಂಕ್‌ಗಳಿಂದ ಆರ್ಥಿಕ ನೆರವು ಪಡೆಯಲು ಸಿದ್ಧರಿರಬೇಕು.

ತರಬೇತಿಯ ಕೊನೆಯಲ್ಲಿ ಸದಸ್ಯರು ಆಯ್ಕೆ ಮಾಡಿಕೊಂಡ ಉದ್ದಿಮೆಯ ಬಗ್ಗೆ ವಿವರವಾದ ಮಾಹಿತಿ, ಅಗತ್ಯವಿರುವ ಕೌಶಲ್ಯ, ಸಂಪನ್ಮೂಲಗಳ ಕ್ರೂಢೀಕರಣದ ಬಗ್ಗೆ ಮಾಹಿತಿ, ಉದ್ದಿಮೆಯ ನಿರ್ವಹಣೆಯಲ್ಲಿ ಎದುರಾಗಬಹುದಾದ ತೊಡಕುಗಳು/ಅಪಾಯಗಳು ಮತ್ತು ಅವುಗಳನ್ನು ಎದುರಿಸಲು ಅಗತ್ಯವಿರುವ ಸಾಮರ್ಥ್ಯ ಮತ್ತು

Scanned with OKEN Scanner


ಚಿಕ್ಕಬಳ್ಳಾಪುರ ಜಿಲ್ಲೆ
RSETI
ಸ್ವಸಹಾಯ ಗುಂಪಿನ ಸದಸ್ಯರಿಗೆ 2 ದಿನಗಳ
"ಉದ್ಯಮಶೀಲತಾ ಅರಿವು ಕಾರ್ಯಕ್ರಮ"
ಗುಮ್ಮನಾಯಕನಪಾಳ್ಯ




ಚಿಕ್ಕಬಳ್ಳಾಪುರ ಜಿಲ್ಲೆ
RSETI
ಗುಮ್ಮನಾಯಕನಪಾಳ್ಯ


INDIA


ಸ್ವಸಹಾಯ ಗುಂಪಿನ ಸದಸ್ಯರಿಗೆ 2 ದಿನಗಳ
“ಉದ್ಯಮಶೀಲತಾ ಅರಿವು ಕಾರ್ಯಕ್ರಮ”






ತೋಳ್ಳಪಲ್ಲಿ ಗ್ರಾಮ ಪಂಚಾಯ್ತಿ
ಬಾಗೇಪಲ್ಲಿ ತಾ॥
ಚಿಕ್ಕಬಳ್ಳಾಪುರ ಜಿಲ್ಲೆ.
RSETI
ಸ್ವಸಹಾಯ ಗುಂಪಿನ ಸದಸ್ಯರಿಗೆ 2 ದಿನಗಳ
"ಉದ್ಯಮಶೀಲತಾ ಅರಿವು ಕಾರ್ಯಕ್ರಮ"

# 2nd Batch 2nd Day EAP Training



**District: Chikkaballapura**
**Taluk : Bagepalli**
**Sub Watershed: Gummalapalli**
**Micro watershed: Kamatampalli**











